**ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಬಸನಗೌಡ ಬಾದರ್ಲಿ (ವಿಧಾನ ಸಭಾ ಕ್ಷೇತ್ರ) ಇವರು ನಿಯಮ 72ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಕುರಿತು.**

**-:: ಪ್ರಶ್ನೆ ::-**

ಸಿಂಧನೂರು ತಾಲ್ಲೂಕಿನ ದೇವರಗುಡಿ, ಮಲ್ಲಾಪುರ ಹಾಗೂ ಮಲ್ಲಾಪುರ ಕ್ಯಾಂಪ್‌ಗೆ ಹೋಗುವ ರಸ್ತೆಯಲ್ಲಿ ಸಿಂಧನೂರು ನಗರಸಭೆಯ ತ್ಯಾಜ್ಯ ವಿಲೇವಾರಿ ಘಟಕವಿದ್ದು ಸದರಿ ಘಟಕದಲ್ಲಿ ಕಸವನ್ನು ಹಸಿ ಕಸ ಮತ್ತು ಒಣ ಕಸವನ್ನು ಬೇರ್ಪಡಿಸಿ ವೈಜ್ಞಾನಿಕವಾಗಿ ವಿಲೇವಾರಿ ಮಾಡದ ಹಿನ್ನಲೆಯಲ್ಲಿ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಬೆಂಕಿ ಬಿದ್ದು ಅಪಾರ ಪ್ರಮಾಣದ ತ್ಯಾಜ್ಯ ಸುಟ್ಟು ಸುತ್ತಮುತ್ತಲಿನ ಮನೆಗಳಿಗೂ ಬೆಂಕಿ ತಗಲುವ ಸಾಧ್ಯತೆಗಳಿರುವುದರಿಂದ ಜನರು ಆತಂಕಗೊಂಡಿರುವರು ಹಾಗೂ ಹೊಗೆ ಮತ್ತು ವಾಸನೆಯಿಂದ ಜನರ ಮತ್ತು ಜಾನುವಾರುಗಳಿಗೆ ಉಸಿರಾಟದ ತೊಂದರೆಯಿಂದ ಬಳಲುತ್ತಿರುವರು ಹಾಗೂ ಸುತ್ತಮುತ್ತಲಿನ ಪರಿಸರವು ಮಲಿನವಾಗುತ್ತಿರುವುದರ ಕುರಿತು ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆದಿರುವ ಬಗ್ಗೆ.

**-:: ಉತ್ತರ ::-**

ರಾಯಚೂರು ಜಿಲ್ಲೆಯಲ್ಲಿ ಒಟ್ಟು 13 ನಗರ ಸ್ಥಳೀಯ ಸಂಸ್ಥೆಗಳಿದ್ದು, ಸಿಂಧನೂರು ನಗರಸಭೆಯು ಅವುಗಳಲ್ಲೊಂದಾಗಿರುತ್ತದೆ. ಸಿಂಧನೂರು ನಗರಸಭೆಯ ವ್ಯಾಪ್ತಿಯಲ್ಲಿ ಪ್ರಸ್ತುತ ಸುಮಾರು 1.07 ಲಕ್ಷಗಳಷ್ಟು ಜನಸಂಖ್ಯೆ ವಾಸವಿದ್ದು ಪ್ರತಿದಿನ ಅಂದಾಜು 36 ಟನ್‌ಗಳಷ್ಟು ಘನತ್ಯಾಜ್ಯ ಉತ್ಪತ್ತಿಯಾಗುತ್ತಿರುತ್ತದೆ. ಪ್ರತಿದಿನ ನಗರಸಭೆ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುತ್ತಿರುವ ತ್ಯಾಜ್ಯವನ್ನು ಕೇಂದ್ರ ಸರ್ಕಾರವು ಜಾರಿಗೆ ತಂದಿರುವ ಘನತ್ಯಾಜ್ಯ ನಿರ್ವಹಣೆ ನಿಯಮಗಳು, 2016 ರನ್ವಯ ಮೂಲದಲ್ಲಿಯೇ ಹಸಿಕಸ ಹಾಗೂ ಒಣಕಸವನ್ನಾಗಿ ವಿಂಗಡಿಸಿ ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಸ್ವಚ್ಛ ಭಾರತ್ ಮಿಷನ್ (ನಗರ) ಯೋಜನೆಯಡಿ ಕ್ರಮವಹಿಸಲಾಗುತ್ತಿದೆ.

ಸಿಂಧನೂರು ನಗರಸಭೆಯಲ್ಲಿ ಉತ್ಪತ್ತಿಯಾಗುತ್ತಿರುವ ಘನತ್ಯಾಜ್ಯ ವಸ್ತುಗಳನ್ನು ನಿಯಮಾನುಸಾರ ವಿಲೇವಾರಿ ಮಾಡಲು, ಸಿಂಧನೂರು ತಾಲ್ಲೂಕು, ಮಲ್ಲಾಪುರ ಗ್ರಾಮದ ಸರ್ವೇ ನಂ. 47ರಲ್ಲಿ ಒಟ್ಟು 13 ಎಕರೆ 7 ಗುಂಟೆ ಜಾಗವನ್ನು ಗುರುತಿಸಿ ಅಭಿವೃದ್ಧಿಪಡಿಸಲಾಗಿದ್ದು, ಅಲ್ಲಿ ಘನತ್ಯಾಜ್ಯ ವಸ್ತುಗಳನ್ನು ನಿರ್ವಹಣೆ ಮಾಡಲಾಗುತ್ತಿದೆ.

ಸದರಿ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಅಂದಾಜು 54,000 ಟನ್‌ಗಳಷ್ಟು ಪಾರಂಪರಿಕ (ಹಳೆಯ) ತ್ಯಾಜ್ಯ ಸಂಗ್ರಹವಾಗಿರುತ್ತದೆ. ಬೇಸಿಗೆ ಪ್ರಾರಂಭವಾಗಿ ಅತಿಯಾದ ಬಿಸಿಲಿನ ಧಗೆಯಿಂದ ಈ ಸಂಗ್ರಹವಾಗಿರುವ ಪಾರಂಪರಿಕ ತ್ಯಾಜ್ಯದ ರಾಶಿಗೆ ದಿನಾಂಕ: 15-02-2025 ರಂದು ಆಕಸ್ಮಿಕವಾಗಿ ಬೆಂಕಿ ತಗುಲಿ ಅಗ್ನಿ ಅವಘಡ ಸಂಭವಿಸಿರುತ್ತದೆ. ಆ ಅಗ್ನಿ ಅವಘಡವನ್ನು ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ನಗರಸಭೆಯ ಸಿಬ್ಬಂದಿಗಳ ಸಹಾಯದಿಂದ ನಿಯಂತ್ರಣಕ್ಕೆ ತಂದು ಬೆಂಕಿಯನ್ನು ಸಂಪೂರ್ಣವಾಗಿ ನಂದಿಸಲಾಗಿರುತ್ತದೆ ಹಾಗೂ ಮುಂದಿನ ದಿನಗಳಲ್ಲಿ ಈ ರೀತಿಯ ಅಗ್ನಿ ಅವಗಡಗಳು ಸಂಭವಿಸದಂತೆ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲಾಗಿರುತ್ತದೆ.

ಮುಂದುವರೆದು, ಈ ಪಾರಂಪರಿಕ ತ್ಯಾಜ್ಯವನ್ನು ನಿಯಮಾನುಸಾರ (ಬಯೋರೆಮಿಡಿಯೇಶನ್) ವಿಲೇವಾರಿ ಮಾಡಲು, ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ರಾಯಚೂರು ಜಿಲ್ಲೆ ರವರು ಕೆ.ಟಿ.ಪಿ.ಪಿ. ನಿಯಮಾವಳಿಗಳನ್ವಯ ಕ್ಲಸ್ಟರ್ ಮಾದರಿಯಲ್ಲಿ ಟೆಂಡರ್ (3ನೇ ಕರೆ) ಅನ್ನು ದಿನಾಂಕ: 04.07.2024 ರಂದು ಕರೆದಿರುತ್ತಾರೆ. ಆದರೆ ಸದರಿ ಟೆಂಡರ್‌ನಲ್ಲಿ ಯಾವುದೇ ಬಿಡ್ ದಾರರು ತಾಂತ್ರಿಕ ಅರ್ಹತೆ ಹೊಂದಿರದ ಕಾರಣ ಮರು ಟೆಂಡರ್ ಕರೆಯಲು ಆದೇಶಿಸಲಾಗಿರುತ್ತದೆ. ಸದರಿ ಟೆಂಡರ್ ಅಂತಿಮಗೊಳಿಸಿ ತ್ವರಿತಗತಿಯಲ್ಲಿ ಪಾರಂಪರಿಕ ತ್ಯಾಜ್ಯವನ್ನು ವಿಲೇ ಮಾಡಲು ಕ್ರಮವಹಿಸಲಾಗುತ್ತಿದೆ.

(ಕಡತ ಸಂಖ್ಯೆ: ನಅಇ 62 ಸಿಎಸ್ಎಸ್ 2025)

**(ರಹೀಂ ಖಾನ್)**
ಪೌರಾಡಳಿತ ಹಾಗೂ ಹಜ್ ಸಚಿವರು